OS 63/2021

DW-01

ದಿನಾಂಕಃ 06-12-2025.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ ಶ್ರೀ SND ಮಾನ್ಯ ವಕೀಲರಿಂದ ವಾದಿಗಳ ಪರವಾಗಿ**

ನಾನು ಹತ್ತನೇ ತರಗತಿಯರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸನ್ 1995 ರಲ್ಲಿ 10 ನೇ ತರಗತಿಯಲ್ಲಿ ಉತ್ತಿರ್ಣನಾಗಿರುತ್ತೇಳೆ. ನನ್ನ ಹತ್ತಿರ ನನ್ನ ಹತ್ತನೇ ತರಗತಿಯ ಅಂಕಪಟ್ಟಿ ಹಾಗೂ ಶಾಲಾ ವರ್ಗಾವಣೆ ಪತ್ರ ಇದ್ದು ಅವುಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ಮದುವೆಯು ದಿಃ 26-05-1997 ರಲ್ಲಿ ಆಗಿರುತ್ತದೆ. 2 ನೇ ಪ್ರತಿವಾದಿಯ ಜನ್ಮ ದಿನಾಂಕ 17-08-2004 ಆಗಿರುತ್ತದೆ. 3 ನೇ ಪ್ರತಿವಾದಿಯ ಜನ್ಮ ದಿನಾಂಕ 26-07-2011 ಆಗಿರುತ್ತದೆ.

2. ನಾನು ವಾದಿಗಳನ್ನು ಪ್ರಸ್ತುತ ದಾವೆ ಸಲ್ಲಿಸಿದ ನಂತರ ನೋಡಿರುತ್ತೇನೆ ಹಾಗೂ ಈ ಮೊದಲ ಅವರುಗಳನ್ನು ನೋಡಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮಂಡನೆ ಮಾಡಿರುವ ವಿಚಾರಗಳ ಬಗ್ಗೆ ನನಗೆ ತಿಳಿದಿರುತ್ತದೆ. ನನಗೆ 1 ನೇ ವಾದಿಯ ಯಜಮಾನರ ಹೆಸರು ಹಾಗೂ ಅವರ ಅಡ್ಡ ಹೆಸರು ಗೊತ್ತಿರುವುದಿಲ್ಲ. 2 ಮತ್ತು 3 ನೇ ವಾದಿಯ ತಂದೆ ಹೆಸರು, ಅವರ ಅಡ್ಡ ಹೆಸರು ಹಾಗೂ ಅವರ ಊರುಗಳ ಬಗ್ಗೆ ಗೊತ್ತಿರುವುದಿಲ್ಲ. ನಾನು ನನ್ನ ಪ್ರತಿವಾದ ಪತ್ರದಲ್ಲಿ 1 ನೇ ವಾದಿಯ ಯಜಮಾನರ ಹೆಸರು ಹಾಗೂ 2 ಮತ್ತು 3 ನೇ ವಾದಿಗಳ ತಂದೆ ಹೆಸರು ಹಾಗೂ ಅವರ ಅಡ್ಡ ಹೆಸರನ್ನು ಬರೆಸಿರುತ್ತೇನೆ. ನನಗೆ ಈ ನ್ಯಾಯಾಲಯದಿಂದ ಸಮನ್ಸ ಬಂದಿದ್ದು ಅದರಲ್ಲಿ 1 ನೇ ವಾದಿಯ ಯಜಮಾನರ ಹೆಸರು ಹನಮಂತ್ರಾಯ ಹಾಗೂ 2 ಮತ್ತು 3 ನೇ ವಾದಿಗಳ ತಂದೆಯ ಹೆಸರು ಹನಮಂತ್ರಾಯ ಎಂದು ನಮೂದು ಮಾಡಿದ್ದು ನಾನು ಅದನ್ನೆ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. 1 ನೇ ವಾದಿ ಸದರಿ ಹನಮಂತ್ರಾಯ ಇವರ ಮೊದಲನೇ ಹೆಂಡತಿ ಹಾಗೂ ನಾನು ಸದರಿಯವರು 2 ನೇ ಹೆಂಡತಿಯಾಗಿರುವ ವಿಚಾರ ತಿಳಿದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಸದರಿ

ಹನಮಂತ್ರಾಯ ಇವರ ಕಾನೂನುಬದ್ಧ ಹೆಂಡತಿಯಾಗಿರುವುದಿಲ್ಲ ಹಾಗೂ 2 ಮತ್ತು 3 ನೇ ವಾದಿಗಳು ಅವರ ಮಕ್ಕಳು ಆಗಿರುವುದಿಲ್ಲ ಎಂದು ನಾನು ವಾದಿಗಳ ವಿರುದ್ದ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿಯಾಗಿ ನಾನು ಅವರುಗಳ ವಿರುದ್ದ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುವುದಿಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ counter claim ನ್ನು ಕೇಳಿರುವುದಿಲ್ಲ.

3. ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ 2 ಮತ್ತು 3 ನೇ ವಾದಿಗಳು ಯಾರ ಮಕ್ಕಳಾಗಿರುತ್ತಾರೆ ಎಂದು ತಿಳಿದುಕೊಳ್ಳಲು ಅವರುಗಳ ಶಾಲೆಗಳಿಗೆ ಹೋಗಿ ವಿಚಾರಿಸಿರುವುದಿಲ್ಲ. ಸದರಿ ಹನಮಂತ್ರಾಯ ಇವರು ಸಾಯುವ ಮುಂಚಿತವಾಗಿ UKP ಖಾನಾಪೂರದಲ್ಲಿ ಗುತ್ತಿಗೆದಾರರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ಹನಮಂತ್ರಾಯ ಇವರ ಕೆಲಸ 2003 ರಲ್ಲಿ ಖಾಯಂಗೊಂಡಿರುತ್ತದೆ. ಸದರಿ ಹನಮಂತ್ರಾಯ ಇವರು ತಮ್ಮ ಕೆಲಸ ಖಾಯಂಗೊಂಡ ನಂತರ ಶೋರಾಪೂರ, ಖಾನಾಪೂರ ಹಾಗೂ ಭೀ ಗುಡಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಸದರಿ ಹನಮಂತ್ರಾಯ ಇವರು ಶೋರಾಪೂರದಲ್ಲಿ 10 ವರ್ಷಗಳವರೆಗೆ ಕೆಲಸವನ್ನು ಮಾಡಿರುತ್ತಾರೆ. ಶೋರಾಪೂರದಲ್ಲಿ ಹನಮಂತ್ರಾಯ ಇವರಿಗೆ quarters ನ್ನು ಕೊಟ್ಟಿದ್ದು ಆದರೆ ಅವರು ಕೇವಲ ತುರ್ತು ಪರಿಸ್ಥಿತಿಯಲ್ಲಿ ಅಲ್ಲಿ ವಾಸ ಮಾಡುತ್ತಿದ್ದು ಹಾಗೂ ಪ್ರತಿನಿತ್ಯ ತಮ್ಮ ಕೆಲಸಕ್ಕೆ ಶಹಾಪೂರದಿಂದ ಹೋಗಿ ಬಂದು ಮಾಡುತ್ತಿದ್ದರು. ಸನ್ 2015 ರಲ್ಲಿ ಸದರಿ ಹನಮಂತ್ರಾಯ ಇವರು ಶಹಾಪೂರಿನಲ್ಲಿ ಮನೆಯನ್ನು ಕಟ್ಟಿಸಿರುತ್ತಾರೆ. ನನ್ನ ಮದುವೆಯಾದ ನಂತರ ನಾನು ಬೀರನೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದೆ. ಶೋರಾಪೂರದಲ್ಲಿ ಹನಮಂತ್ರಾಯ ಇವರಿಗೆ quarters ನ್ನು ಕೊಟ್ಟಿದ್ದು ಆದರೆ ಅವರು ತಮ್ಮ ಮೊದಲನೇ ಹೆಂಡತಿ ಮಕ್ಕಳೊಂದಿಗೆ ವಾಸ ಮಾಡುತ್ತಿದ್ದರೂ ಕೂಡಾ ನಾನು ಅವರು ಪ್ರತಿನಿತ್ಯ ತಮ್ಮ ಕೆಲಸಕ್ಕೆ ಶಹಾಪೂರದಿಂದ ಹೋಗಿ ಬಂದು ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸಾಕ್ಷಿಗೆ ಈಗ ನಿಡಿ.21 ನ್ನು ತೋರಿಸಿ ಅದರಲ್ಲಿ ಸದರಿ ಹನಮಂತ್ರಾಯ ಇವರು 1 ರಿಂದ 3 ನೇ ವಾದಿಗಳ ಹೆಸರುಗಳನ್ನು ತೋರಿಸಿರುತ್ತಾರೆ ಎಂದು ಹೇಳಿದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ ಹಾಗೂ 2 ನೇ ಪ್ರತಿವಾದಿಯ ಹೆಸರು ಕೂಡಾ ಅದರಲ್ಲಿ ನಮೂದಾಗಿರುವುದಾಗಿ ಹೇಳುತ್ತಾರೆ. ನಿಡಿ.21 ರಲ್ಲಿ ರೇಣುಕಾ, ರಾಹುಲ ಹಾಗೂ ಮಾರುತಿ ಎಂದು ತೋರಿಸಿರುವವರು ಪ್ರಸ್ತುತ ಪ್ರಕರಣದ ವಾದಿಗಳಾಗಿರುತ್ತಾರೆ. ಸನ್ 1997 ರಲ್ಲಿ ನಾನು ಅಪ್ರಾಪ್ತ ವಯಸ್ಕಳಾಗಿದ್ದು ನನ್ನ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನಿಡಿ.11 ರಂತೆ ಮದುವೆಯ ಪೊಟೋಗಳನ್ನು ಹಾಗೂ ನಿಡಿ.32 ರಂತೆ ಮದುವೆ ಕಾರ್ಡು ಗಳನ್ನು ಸುಳ್ಳು ಸೃಷ್ಟಿ ಮಾಡಿ ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 1997 ರಲ್ಲಿ ಅಪ್ರಾಪ್ತ ವಯಸ್ಕಳಾಗಿದ್ದು ತಿಳಿದು ಬರುತ್ತದೆ ಎಂದು ಹೇಳಿ ನನ್ನ ಹತ್ತನೇ ತರಗತಿಯ ಅಂಕಪಟ್ಟಿ ಹಾಗೂ ನನ್ನ ಶಾಲಾ ವರ್ಗಾವಣಾ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನದು 2002 ರಲ್ಲಿ ಮದುವೆಯಾಗಿದ್ದರೂ ಕೂಡಾ 1997 ರಲ್ಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನಮಂತ್ರಾಯ ಇವರ ನನ್ನ ಒಳಗಿನ ಸಂಬಂದಿ ಎಂದರೆ ಸರಿ. ಸದರಿ ಹನಮಂತ್ರಾಯ ಇವರು ಈ ಮೊದಲು 1 ನೇ ವಾದಿಯನ್ನು ಮದುವೆಯಾಗಿರುತ್ತಾರೆ ಎಂದು ತಿಳಿದಿದ್ದರೂ ಕೂಡಾ ನಾನು ಅವರ ಜೊತೆ 2 ನೇ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಹತ್ತನೆ ತರಗತಿವರೆಗೆ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ ಆದರೆ ಕೇವಲ 3 ನೇ ತಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬೀರನೂರು ಗ್ರಾಮದಲ್ಲಿರುವ ಸದರಿ ಮನೆಯ ನಂಬರ ಹಾಗೂ ಅದು ಯಾವ ವಾರ್ಡ ನಂಬರಿನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಬೀರನೂರು ಗ್ರಾಮದಲ್ಲಿ ನಾನು ನ್ಯಾಯ ಪಡಿತರ ಚೀಟಿಯನ್ನು ಹೊಂದಿರುವುದಿಲ್ಲ. ಸದರಿ ಸಂದರ್ಭದಲ್ಲಿ ನ್ಯಾಯ ಪಡಿತರ ಚೀಟಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹನಮಂತ್ರಾಯ ಇವರು ತೀರಿಕೊಂಡ ನಂತರ ದಿಃ 12-10-2020 ರಂದು 1 ನೇ ವಾದಿಯು ಅನುಕಂಪದ ಆಧಾರದ ಮೇಲೆ ಕೆಲಸವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ತಾವು ಸಲ್ಲಿಸಿರುವುದಾಗಿ

ಹೇಳುತ್ತಾರೆ. 1 ನೇ ವಾದಿಯು ಸದರಿ ಅರ್ಜಿಯನ್ನು ಸಲ್ಲಿಸಿರುವ ವಿಚಾರ ನನಗೆ ಗೊತ್ತಾದ ಮೇರೆಗೆ 8 ತಿಂಗಳ ನಂತರ ಅಂದರೆ ದಿಃ 11-08-2021 ರಂದು ನಾನು ಸಂಬಂದಪಟ್ಟ ಅಧಿಕಾರಿಗಳಿಗೆ ಅನುಕಂಪದ ಆಧಾರದ ಮೇಲೆ ಕೆಲಸವನ್ನು ಕೊಡಲು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸದರಿ ಸದರಿ ಹನಮಂತ್ರಾಯ ಇವರ 2 ನೇ ಹೆಂಡತಿಯಾಗಿದ್ದರಿಂದ ಅನುಕಂಪದ ಆಧಾರದ ಮೇಲೆ ಅವರ ಕೆಲಸವನ್ನು ಪಡೆಯಲು ಹಾಗೂ ಸದರಿ ಮೃತರಿಗೆ ಬರುವ ಯಾವುದೇ ಸೌಲಭ್ಯವನ್ನು ಪಡೆಯಲು ಅರ್ಹಳು ಇರುವುದಿಲ್ಲ ಎಂದರೆ ಸರಿಯಲ್ಲ.1 ನೇ ವಾದಿಯು ಸದರಿ ಹನಮಂತ್ರಾಯ ಇವರ ಮೊದಲನೇ ಹೆಂಡತಿಯಾಗಿರುತ್ತಾರೆ ಎಂದು ನನಗೆ ಗೊತ್ತಿದ್ದರೂ ಕೂಡಾ ನಾನು ಸದರಿಯವರೊಂದಿಗೆ 2 ನೇ ಮದುವೆಯಾಗಿದ್ದರಿಂದ ನಾನು ಸದರಿ ಸೌಲಭ್ಯಗಳನ್ನು ಪಡೆಯುವ ಅಧಿಕಾರವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಸದರಿ ಮೃತ ಹನಮಂತ್ರಾಯ ಇವರ ವಾರಸುದಾರರಾಗಿದ್ದರೂ ಕೂಡಾ ಅವರು ಯಾರು ಎಂದು ಹಾಗೂ ಸದರಿಯವರು ಸದರಿ ಹನಮಂತ್ರಾಯ ಇವರಿಗೆ ಯಾವುದೇ ಸಂಬಂದ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಗಾಗಲೀ ಹಾಗೂ 2 ಮತ್ತು 3 ನೇ ಪ್ರತಿವಾದಿಗಳಿಗೆ ಸದರಿ ಹನಮಂತ್ರಾಯ ಇವರ ನೌಕರಿ ಹಾಗೂ ಅವರ ಆಸ್ತಿಗಳಲ್ಲಿ ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**4 ರಿಂದ 6 ನೇ ಪ್ರತಿವಾದಿಗಳ ಪರ ಮಾನ್ಯ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟಿ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.